ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ

**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು - 560 001**

ಸಶಿಅ/ಸಿ4(ಸಿ2)ವಾನಿ.ವೆ/81/2003-04 ದಿನಾಂಕ: 16-04-2012

## ಬಹಿರಂಗ ಹರಾಜು ಪ್ರಕಟಣೆ ಸಂಖ್ಯೆ: 1/2011-12

ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಸೇರಿದ ವಾಹನ ಸಂಖ್ಯೆ ಕೆ.ಎ.01.ಜಿ.6789 ಟಾಟಾ ಎಸ್ಟೇಟ್ ವಾಹನವನ್ನು "ಎಲ್ಲಿ ಹೇಗಿದೇಯೋ ಅದೇ ಸ್ಥಿತಿಯಲ್ಲಿ" ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಅದರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ | ಹರಾಜು ಮಾಡಲು ಉದ್ದೇಶಿಸಿರುವ ಸಾಮಗ್ರಿಗಳ ವಿವರಗಳು | ಪರಿಮಾಣ | ನಿಗಧಿಪಡಿಸಿದ ಮೌಲ್ಯ | ಹರಾಜಿನಲ್ಲಿ ಭಾಗವಹಿಸುವವರು ಠೇವಣಿ ಮಾಡಬೇಕಾದ ಮೊತ್ತ (ಡಿಮ್ಯಾಂಡ್ ಡ್ರಾಫ್ಟ್ ಮಾತ್ರ) ರೂ ಗಳಲ್ಲಿ | ಖಾಲಿ ಫಾರ್ಮ್ ಬೆಲೆ (ಹಿಂದಿರುಗಿಸಲಾಗುವುದಿಲ್ಲ) ನಗದು ರೂಪದಲ್ಲಿ ಮಾತ್ರ ರೂ.ಗಳಲ್ಲಿ | ಖಾಲಿ ಫಾರ್ಮ್‌ಗಳನ್ನು ನೀಡುವ ದಿನಾಂಕ | ಮೊಹರಾದ ಲಕೋಟೆಗಳನ್ನು ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ಬಹಿರಂಗ ಹರಾಜು ಮಾಡಲಾಗುವ ದಿನಾಂಕ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಟಾಟಾ ಎಸ್ಟೇಟ್ ವಾಹನ | 1 | ರಹಸ್ಯವಾಗಿರಿಸಿದೆ. | ರೂ.700/- | ರೂ.100/- | 16.04.2012 ರಿಂದ 23.04.2012 ಸಂಜೆ 5.30ರವರೆಗೆ. | 25.04.2012 ಸಂಜೆ 4.00 ಗಂಟೆಗೆ | 27.04.2012 ಮಧ್ಯಾಹ್ನ 1.00 ಕ್ಕೆ. |

**ಸಹಿ**

ನಿರ್ದೇಶಕರು (ಕಾರ್ಯಕ್ರಮ)
ಸರ್ವ ಶಿಕ್ಷಣ ಅಭಿಯಾನ

## ಷರತ್ತು ಮತ್ತು ನಿಬಂಧನೆಗಳು

1. ಈ ಕಛೇರಿಯಿಂದ ನಿಗಧಿಪಡಿಸಿರುವ ಖಾಲಿ ನಮೂನೆಗಳನ್ನು ರೂ.100/- ಗಳನ್ನು ನಗದು ರೂಪದಲ್ಲಿ (ಹಿಂದಿರುಗಿಸಲಾಗುವುದಿಲ್ಲ) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು ಇವರ ಕಛೇರಿಯಲ್ಲಿ ಸಂದಾಯ ಮಾಡಿ ನಿಗಧಿತ ದಿನಾಂಕದಿಂದ ಪಡೆಯಬಹುದು. ಫಾರಂಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ.

2. ಭರ್ತಿ ಮಾಡಿದ ನಮೂನೆಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ 700/- ರೂ ಠೇವಣಿಯೊಂದಿಗೆ (ಬ್ಯಾಂಕ್ ಹುಂಡಿ) ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ ಹಾಗೂ ಸಮಯದೊಳಗೆ ಕಛೇರಿಗೆ ತಲುಪಿಸುವುದು. ಡಿ.ಡಿ.ಯನ್ನು ಎಸ್.ಪಿ.ಡಿ, ಎಸ್.ಎಸ್.ಎ, ಬೆಂಗಳೂರು ಎಂಬ ಹೆಸರಿನಲ್ಲಿ ಪಡೆಯುವುದು.

3. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಹರಾಜಿನ ದಿನದಂದು ಹರಾಜಿಗೆ ನಿಗಧಿಪಡಿಸಿರುವ ದಿನಾಂಕದಂದು ಬೆಳಿಗ್ಗೆ 11.00 ಘಂಟೆಯ ಒಳಗೆ ನಿಗಧಿತ ಠೇವಣಿಯನ್ನು ಸಂದಾಯ ಮಾಡಿ ಹರಾಜಿನಲ್ಲಿ ಭಾಗಹಿಸತಕ್ಕದ್ದು, ಠೇವಣಿ ಸಂದಾಯ ಮಾಡಿದ ವ್ಯಕ್ತಿಯು ಹರಾಜಿನಲ್ಲಿ ಭಾಗವಹಿಸತಕ್ಕದ್ದು.

4. ದಿನಾಂಕ 27.04.2012 ರಂದು 1.00 ಗಂಟೆಗೆ ಈ ಕಛೇರಿಯಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ನಿಗಧಿತ ಠೇವಣಿ ಸಂದಾಯ ಮಾಡಿರುವವರು ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಹರಾಜಿನಲ್ಲಿ ಹೆಚ್ಚು ಮೊತ್ತಕ್ಕೆ ಹರಾಜು ಕೂಗಿದವರನ್ನು ಹರಾಜಿನಲ್ಲಿ ಯಶಸ್ವಿ ಹರಾಜುದಾರರೆಂದು ಪರಿಗಣಿಸಲಾಗುವುದು.

5. ಬಹಿರಂಗ ಹರಾಜಿನ ದಿನದಂದೇ ಹರಾಜಿನ ನಂತರ ಆ ಸ್ಥಳದಲ್ಲಿಯೆ ನಮೂನೆಗಳನ್ನು ತೆರೆಯಲಾಗುವುದು. ನಮೂನೆಯಲ್ಲಿ ಯಾವ ಹರಾಜುದಾರರು ಹೆಚ್ಚು ಮೊತ್ತವನ್ನು ನಮೂದಿಸಿರುತ್ತಾರೋ ಅವರನ್ನು ಯಶಸ್ವಿ ಹರಾಜುದಾರರೆಂದು ಪರಿಗಣಿಸಲಾಗುವುದು. ಹರಾಜು ಕೂಗಿದ ಮೊತ್ತ ಹಾಗೂ ನಿಗಧಿಪಡಿಸಿದ ನಮೂನೆಯಲ್ಲಿ ಭರ್ತಿ ಮಾಡಿರುವ ಮೊತ್ತದ ಪೈಕಿ ಯಾವುದು ಹೆಚ್ಚು ಇರುತ್ತದೋ ಸದರಿ ಮೊಬಲಗನ್ನು ಪರಿಗಣಿಸಲಾಗುವುದು.

6. ಕಾಲಂ 5 ರಂತೆ ಆಗುವ ಯಶಸ್ವಿ ಹರಾಜುದಾರರು ಸ್ಥಳದಲ್ಲಿಯೇ ವಾಹನದ ಬಿಡ್ಡಿನ ಮೊತ್ತದ 50% ಮೊಬಲಗನ್ನು ನಗದು ರೂಪದಲ್ಲಿ ಪಾವತಿಸತಕ್ಕದ್ದು. ತಪ್ಪಿದಲ್ಲಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಹರಾಜುದಾರರು ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲ್ಪಟ್ಟ ನಂತರ ಹರಾಜುದಾರರು ವಿಳಂಬ ಮಾಡದೆ ಉಳಿದ 50% ಹಣವನ್ನು 2 ದಿನಗಳ ಅವಧಿಯಲ್ಲಿ ಪಾವತಿಸಿ, ಹರಾಜು ಮಾಡಲಾದ ವಾಹನವನ್ನು ತೆಗೆದುಕೊಂಡು ಹೋಗುವುದು. ತಪ್ಪಿದಲ್ಲಿ ಹರಾಜುದಾರರು ತುಂಬಿರುವ ಪೂರ್ಣ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ, ಅದುವರೆಗೆ ನಡೆದ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗುವುದು. ಮತ್ತು ಮರು ಬಹಿರಂಗ ಹರಾಜಿಗೆ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

7. ಹರಾಜುದಾರರು ತುಂಬಿದ ಠೇವಣಿಗೆ ಬಡ್ಡಿಯನ್ನು ಕೊಡಲಾಗುವುದಿಲ್ಲ.

8. ಆಸಕ್ತಿಯುಳ್ಳ ಸಾರ್ವಜನಿಕರು ವಾಹನವನ್ನು ಕಛೇರಿಯ ವೇಳೆಯಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಆವರಣದ ನಿಗಧಿತ ಸ್ಥಳದಲ್ಲಿ ಪರಿಶೀಲಿಸಬಹುದು.

9. ಮೇಲೆ ತಿಳಿಸಿರುವ ದಿನಾಂಕಗಳಲ್ಲಿ ಯಾವುದಾದರೂ ಸಾರ್ವಜನಿಕ ರಜೆ ಆಗಿದ್ದಲ್ಲಿ ಮುಂದಿನ ಕೆಲಸದ ದಿನವೂ ಅನ್ವಯವಾಗುತ್ತದೆ.

10. ಬಹಿರಂಗ ಹರಾಜು ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳು ಒಳಪಟ್ಟಿರುತ್ತದೆ.

**ಸಹಿ**

ನಿರ್ದೇಶಕರು (ಕಾರ್ಯಕ್ರಮ)
ಸರ್ವ ಶಿಕ್ಷಣ ಅಭಿಯಾನ